ಚಿತ್ರಮಂದಿರಗಳಿಂದ ಎತ್ತಂಗಡಿಯಾಯ್ತು.

ಅದೇ ವಾರ ಬಿಡುಗಡೆಯಾದ ಡಾರ್ಲಿಂಗ್ ಕೃಷ್ಣ ನಟಿಸಿ ನಿರ್ದೇಶಿಸಿದ್ದ, ನಟಿ ಮಿಲನಾ ನಾಗರಾಜ್ ನಿರ್ಮಿಸಿ ನಟಿಸಿದ್ದ 'ಲವ್ ಮಾಕ್ಟೇಲ್' ಎಂಬ ವಿಷಾದ ಪ್ರೇಮಕಥೆಯ ಕಥೆಯೂ ಅಷ್ಟೇ ಆಯಿತು. ಪ್ರೇಕ್ಷಕನ ಎದೆಗೆ ಇಳಿಯುವ ಮುನ್ನವೇ ಚಿತ್ರದ ಕೌಟೌಟುಗಳು ಚಿತ್ರಮಂದಿರದ ಎದುರಿನಿಂದ ಇಳಿದುಹೋದವು. ಆದರೆ ಕೃಷ್ಣ ಮತ್ತು ಮಿಲನಾ ಹಟ ಬಿಡದೆ ಚಿತ್ರ ಉಳಿಸಿಕೊಂಡರು. ಹಾಗಾಗಿ ಚಿತ್ರ ಬಿಡುಗಡೆಯಾದ ವಾರಾಂತ್ಯದಲ್ಲಿ ಬೆಂಗಳೂರಿನ 'ಶಾರದಾ' ಚಿತ್ರಮಂದಿರದಲ್ಲಿ ಮಾತ್ರವೇ ಉಳಿದುಕೊಂಡಿದ್ದ 'ಲವ್ ಮಾಕ್ಟೇಲ್' ಕಿಕ್ಕು ನಿಧಾನಕ್ಕೆ ಬೇರೆ ಚಿತ್ರಮಂದಿರಗಳಲ್ಲಿಯೂ ಪಸರಿಸತೊಡಗಿತು. ಸಾಮಾಜಿಕ ಜಾಲತಾಣಗಳಲ್ಲಿ ಚಿತ್ರದ ಬಗ್ಗೆ ಪ್ರಶಂಸೆಯ ಮಾತುಗಳು ಕೇಳಿಬಂದು ಜನರು ನಿಧಾನಕ್ಕೆ ಚಿತ್ರಮಂದಿರದ ಕಡೆಗೆ ಮುಖ ಮಾಡುವ ಹೊತ್ತಿಗೆ ಚಿತ್ರಮಂದಿರಗಳೇ ಬಾಗಿಲು ಮುಚ್ಚಿಕೊಂಡು ಹೋಗಿದ್ದವು.

ಕೆ. ಶಿವರುದ್ರಯ್ಯ ಅವರ 'ರಾಮನ ಸವಾರಿ' ಸಿನಿಮಾ ಕೂಡ ಜನವರಿ ಕೊನೆಯ ವಾರವೇ ತೆರೆಕಂಡಿದ್ದು.

ಈ ವರ್ಷ 'ಲವ್ ಮಾಕ್ಟೇಲ್'ನಂತೆಯೇ ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟು ಚರ್ಚೆಗೊಳಗಾಗಿ, ಜನರ ಬಾಯಲ್ಲಿ ನಲಿನಲಿದಾಡಿದ ಇನ್ನೊಂದು ಸಿನಿಮಾ ಕೆ.ಎಸ್. ಅಶೋಕ ನಿರ್ದೇಶನದ 'ದಿಯಾ'. ಇವರ ನಿರ್ದೇಶನದ ಮೊದಲ ಸಿನಿಮಾ '6–5=2' ಸಿನಿಮಾ ಕೂಡ ಕೆಲವು ವರ್ಷಗಳ ಹಿಂದೆ ಸಾಕಷ್ಟು ಸುದ್ದಿ ಮಾಡಿತ್ತು. 'ದಿಯಾ' ಸಿನಿಮಾ ಫೆಬ್ರುವರಿ ಮೊದಲ ವಾರದಲ್ಲಿಯೇ ಬಿಡುಗಡೆಯಾದರೂ ಚಿತ್ರಮಂದಿರದಲ್ಲಿ ಸದ್ದು ಮಾಡಿದ್ದಕ್ಕಿಂತ ಸೋಷಿಯಲ್ ಮೀಡಿಯಾದಲ್ಲಿ ಸುದ್ದಿ ಮಾಡಿದ್ದೇ ಹೆಚ್ಚು. ಆ ಸಿನಿಮಾವನ್ನು ಜನರು ಅಮೆಜಾನ್ ಪ್ರೈಮ್‌ನಲ್ಲಿ ನೋಡಿ ಖುಷಿಪಟ್ಟರು. ಖುಷಿ ಮತ್ತು ಪೃಥ್ವಿ ಅಂಬರ್ ಎಂಬ ಇಬ್ಬರು ಪ್ರತಿಭಾವಂತರವನ್ನು ಚಿತ್ರರಂಗಕ್ಕೆ ಕೊಟ್ಟಿದ್ದು ಈ ಸಿನಿಮಾದ ಹೆಗ್ಗಳಿಕೆ. ಆ ಇಬ್ಬರ ಕೈಯಲ್ಲಿಯೂ ಈಗ ಸಾಕಷ್ಟು ಅವಕಾಶಗಳು ಇರುವುದನ್ನು ನೋಡಿದರೆ 'ದಿಯಾ' ಚಿತ್ರ ಮಾಡಿದ ಪರಿಣಾಮ ಗಣನೆಗೆ ಬರುತ್ತದೆ.

2017ರಲ್ಲಿ 'ರಾಜಹಂಸ' ಎಂಬ ಸಿನಿಮಾ ನಿರ್ದೇಶಿಸಿದ್ದ ಜಡೇಶ್ ಕುಮಾರ್ ಹಂಪಿ ಅವರ ಪ್ರತಿಭೆಯನ್ನು ಪೂರ್ತಿ ಪ್ರಮಾಣದಲ್ಲಿ ಪ್ರದರ್ಶಿಸಿದ ಚಿತ್ರ 'ಜಂಟಲ್‌ಮನ್'. ಪ್ರಜ್ವಲ್ ದೇವರಾಜ್, ನಿದ್ರಾರೋಗದಿಂದ ಬಳಲುತ್ತಿರುವ ಯುವಕನಾಗಿ





ಜನವರಿಯಲ್ಲಿ ಬಿಡುಗಡೆಯಾದ 'ಇಂಡಿಯಾ vs ಇಂಗ್ಲೆಂಡ್' ಚಿತ್ರದಲ್ಲಿ ವಸಿಷ್ಠ ಸಿಂಹ ಮತ್ತು ಮಾನ್ವಿತಾ ಕಾಮತ್